**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ17.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ. J.R.P.ವಕೀಲರಿಂದಃ**

ಪ್ರಸುತ್ತ ದಾವೆಯನ್ನು ನಾನು ಸಲ್ಲಿಸಿರುವುದಿಲ್ಲ. ವಾದಿ ನನ್ನ ತಾಯಿ. ನಾನು ಈ ದಾವೆಯನ್ನು ಸಲ್ಲಿಸದೇ ಇರುವುದರಿಂದ ವಾದ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿಲ್ಲ ಎಂದರೆ ಸರಿ. ವಾದಿ ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ಅವರ ಆರೋಗ್ಯಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕ ಹಾಜರುಪಡಿಸಿರುವುದಿಲ್ಲ. ದಾವಾಸ್ವತ್ತು ಮೂಲತಃ ನಮ್ಮ ತಂದೆಗೆ ಸೇರಿದ ಆಸ್ತಿ. ದಾವಾಸ್ವತ್ತು ನನ್ನ ತಂದೆಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ದಾವಾಸ್ವತ್ತನ್ನು ಮಂಜೂರು ಮಾಡಿಸಿಕೊಳ್ಳಲು ನನ್ನ ತಂದೆ ಯಾವ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಅರ್ಜಿಯಲ್ಲಿ ಮಂಜೂರಾತಿಗೆ ಕೋರಿದ ಸ್ವತ್ತಿನ ಸ.ನಂ:, ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ನಮೂದಿಸಲಾಗಿದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮಂಜೂರಾತಿಗೆ ಮುನ್ನ ಸರ್ವೆಯರ್ ಮಂಜೂರಾತಿ ಕೋರಿದ ಜಮೀನನ್ನು ಅಳತೆ ಮಾಡಿ ನಕ್ಷೆ ತಯಾರಿಸಿರುತ್ತಾರೆ ಎಂದರೆ ಸರಿ. ಸದರಿ ದಾವಾಸ್ವತ್ತಿಗೆ ಸಂಬಂದಿಸಿದ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮಂಜೂರಾತಿಗೆ ಮುನ್ನ ರಾಜಸ್ವನಿರೀಕ್ಷಕರು ಅಹವಾಲು ತಃಖ್ತೆಯನ್ನು ಸಲ್ಲಿಸುತ್ತಾರೆ ಎಂದರೆ ಸರಿ. ಸದರಿ ಅಹವಾಲು ತಃಖ್ತೆಯಲ್ಲಿ ನನ್ನ ತಂದೆಗೆ ಈ ಹಿಂದೆ ಮಂಜೂರಾಗಿರುವ ಜಮೀನುಗಳ ವಿವರ ಮತ್ತು ಅವರು ಹಾಲಿ ಸ್ವಾಧೀನದಲ್ಲಿರುವ ಜಮೀನುಗಳ ವಿವರವನ್ನು ಪರಿಶೀಲಿಸಿ ನಮೂಧಿಸಿರುತ್ತಾರೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಅಹವಾಲು ತಃಖ್ತೆಯಲ್ಲಿ ಅರ್ಜಿದಾರರ ಕುಟುಂಬದ ಸದಸ್ಯರ ವಿವರವನ್ನು ನಮೂದಿಸುತ್ತಾರೆ ಎಂದರೆ ಸರಿ. ಮಂಜೂರಾತಿ ಕಾಲಕ್ಕೆ ನಮ್ಮ ತಂದೆಯ ಕುಟುಂಬದ ವಿವರವನ್ನು ಅಹವಾಲು ತಃಖ್ತೆಯಲ್ಲಿ ನಮೂದಿಸಿರಬಹುದು ಅದರ ಬಗ್ಗೆ ನನಗೆ ವಿವರವಾಗಿ ತಿಳಿದಿಲ್ಲ.

2. ಮಂಜೂರಾತಿಯ ಮುನ್ನ ನನ್ನ ತಂದೆ ರೂ.80/-ಗಳ ಕಿಮ್ಮತ್ತು ಕಟ್ಟಿದ್ದು ಅದರ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪ್ರತಿವಾದಿಯ ಗಂಡ ಮಂಡಲಪಂಚಾಯಿತಿ ಸದಸ್ಯರಾಗಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ವಾದಿಯ ತಾಯಿಯ ತಂದೆಯ ಹೆಸರು ಹನುಮಂತಯ್ಯ ಎಂದರೆ ಸರಿ. ನನ್ನ ತಾಯಿಗೆ 3 ಜನ ತಂಗಿಯರು ಅವರೆಂದರೆ ಯಲ್ಲಮ್ಮ, ಲಕ್ಕಮ್ಮ, ಪುಟ್ಟರಂಗಮ್ಮ ಎಂದರೆ ಸರಿ. ಯಲ್ಲಮ್ಮನ ಗಂಡನ ಹೆಸರು ಮರುಳಯ್ಯ ಮತ್ತು ಲಕ್ಷ್ಮಮ್ಮನ ಗಂಡನ ಹೆಸರು ರಾಮಯ್ಯ, ಪುಟ್ಟರಂಗಮ್ಮರವರ ಗಂಡನ ಹೆಸರು ಮೂಡ್ಲಯ್ಯ. ವಾದಿಯ ಗಂಡನ ಹೆಸರು ರಾಮಯ್ಯ. ನನ್ನ ತಂದೆಯ ಮೂಲ ಊರು ಕಿಬ್ಬನಹಳ್ಳಿ ಪಾಳ್ಯ. ನನ್ನ ತಂದೆಗೆ 3 ಜನ ಅಣ್ಣ ತಮ್ಮಂದಿರು ಅವರೆಂದರೆ ರಾಮಯ್ಯ, ಲಂಕಪ್ಪ ಮತ್ತು ಹನುಮಯ್ಯ. ಅವರ ತಂದೆಯ ಹೆಸರು ಹನುಮಂತಯ್ಯ. ನನ್ನ ತಾಯಿಯ ತಂದೆಗೆ ಗಂಡುಮಕ್ಕಳಿರುವುದಿಲ್ಲ ಎಂದರೆ ಸರಿ. ಅವರ ಆಸ್ತಿಗಳಲ್ಲಿ ನನ್ನ ತಂದೆಯೇ ವಾಸವಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಗೆ ತ್ಯಾಗಟೂರಿನಲ್ಲಿ 5 ಗುಂಟೆ ಜಮೀನು ಇರುತ್ತದೆ. ನನ್ನ ತಂದೆಯ ಅಸ್ತಿಯನ್ನು ಮಾರಿ ನನ್ನ ತಾಯಿ ಸದರಿ 5 ಗುಂಟೆ ಜಮೀನನ್ನು ಗೋವಿಂದಪ್ಪರವರ ಕಡೆಯಿಂದ ಖರೀದಿಸಿರುತ್ತಾರೆ. ಅದರ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತ್ಯಾಗಟೂರಿನಲ್ಲಿ ತಿಮ್ಮಕ್ಕ ಎನ್ನುವವರಿಂದ ನಾನು 10 ಗುಂಟೆ ಜಮೀನನ್ನು ಖರೀದಿಸಿರುತ್ತೇನೆ.

3. ಕಿಬ್ಬನಹಳ್ಳಿ ಪಾಳ್ಯದಲ್ಲಿ ನನ್ನ ತಂದೆಯ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ನನ್ನ ತಾತನಿಗೆ ಜಮೀನು ಇತ್ತು. ನನ್ನ ತಂದೆಯ ತಂದೆ ಹನುಮಂತಯ್ಯರವರಿಗೆ ಕಿಬ್ಬನಹಳ್ಳಿ ಪಾಳ್ಯದಲ್ಲಿ ಸ.ನಂಃ 74/2 ರಲ್ಲಿ 4 ಎಕರೆ ಜಮೀನುಇತ್ತು ಎಂದರೆ ಸರಿ. ಅದೇ ಸ.ನಂಃನಲ್ಲಿ ನನ್ನ ಹೆಸರಿಗೆ 13 ಗುಂಟೆ ಜಮೀನು ಈಗ ಇರುತ್ತದೆ. ಸ.ನಂಃ 72 ರಲ್ಲಿ ನನ್ನ ತಾತ ಮತ್ತು ಅವರಅಣ್ಣ ತಮ್ಮಂದಿರಿಗೆ ಜಮೀನು ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ಕಿಬ್ಬನಹಳ್ಳಿ ಪಾಳ್ಯ ತಿಪಟೂರು ತಾಲ್ಲೂಕಿನಲ್ಲಿರುತ್ತದೆ.

4. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ- ಕಾರೇಹಳ್ಳಿ ರಸ್ತೆ, ಪಶ್ಚಿಮಕ್ಕೆ- ಸ.ನಂಃ 14 ರ ಉಳಿಕೆ ಜಮೀನು , ಉತ್ತರಕ್ಕೆ- ಶಿವಮೊಗ್ಗ - ಬೆಂಗಳೂರು ರಸ್ತೆ , ದಕ್ಷಿಣಕೆ- ಹೇಮಾವತಿ ಚಾನೆಲ್ ಮತ್ತು ರಸ್ತೆ ಇರುತ್ತದೆ. ಸದರಿ ಚಕ್ಕುಬಂದಿಯಲ್ಲಿ ನನ್ನ ತಂದೆ ಸಾಗುವಳಿ ಮಾಡುತ್ತಿದ್ದರು. ಸದರಿ ಎರಡು ಚಕ್ಕುಬಂದಿಗಳು ಬೇರೆ ಎಂದರೆ ಸರಿಯಲ್ಲ. ನಿ.ಪಿ.2 ರ ಮೇಲೆ ನನ್ನ ತಂದೆಯ ಹೆಸರಿಗೆ 1971 ರಲ್ಲಿ ದಾವಾಸ್ವತ್ತಿನ ಖಾತೆ ಪಹಣಿ ವರ್ಗಾವಣೆ ಯಾಗಿದ್ದು ಸದರಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ.

5. ದಾವಾಸ್ವತ್ತನ್ನು 1 ನೇ ಪ್ರತಿವಾದಿಯ ಗಂಡನಿಗೆ ಎಂ.ಆರ್.ನಂಃ 7/1993-94 ರಂತೆ ಸಾಗುವಳಿ ಚೀಟಿಯನ್ನು ನೀಡಿದ್ದು ಅದರಂತೆ ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಎಂ.ಆರ್.ನಂಃ1/1995 -96 ರಂತೆ ದಾವಾಸ್ವತ್ತಿನ ಖಾತೆ ಮತ್ತು ಪಹಣಿ 1 ನೇ ಪ್ರತಿವಾದಿ ಮತ್ತು ಅವರ ಗಂಡನ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆ ಮರಣ ಹೊಂದಿದ ನಂತರ ಅವರ ಮೋಸದಿಂದ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. 1 ನೇ ಪ್ರತಿವಾದಿಯ ಗಂಡ ಮರಣ ಹೊಂದಿಂದನಂತರ ಎಂ.ಆರ್.ಹೆಚ್.ನಂ .4/2018-19 ರಂತೆ 1 ನೇ ಪ್ರತಿವಾದಿ ಪವತಿ ವಾರಸಿನ ಮೇಲೆ ದಾವಾಸ್ವತ್ತಿನ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಎಂ.ಆರ್.ಗಳನ್ನು ಕಂದಾಯ ನ್ಯಾಯಾಲಯದ ಮುಂದೆ ಪ್ರಶ್ನಿಸಿರುವುದಿಲ್ಲ.

6. ದಾವಾಸ್ವತ್ತಿನಲ್ಲಿ ಹೇಮಾವತಿ ನಾಲೆಗೆ ಕೆಲವು ಭಾಗ ಭೂ ಸ್ವಾಧೀನವಾಗಿರುತ್ತದೆ ಎಂದರೆ ಸರಿ . ಹೇಮಾವತಿ ನಾಲೆಗೆ ಭೂಸ್ವಾಧೀನವಾದರೆ ಸ್ವಾಧೀನದಲ್ಲಿರುವವರಿಗೆ ಅವಾರ್ಡ್ ನೋಟೀಸ್ ನೀಡಲಾಗುತ್ತದೆ ಎಂದರೆ ಸರಿ. ಸಂಬಂದ ಪಟ್ಟ ಇಲಾಖೆಯವರು ನಮಗೆ ನೋಟೀಸ್ ನೀಡಿರುವ ಬಗ್ಗೆ ನನಗೆ ತಿಳಿದಿಲ್ಲ. ದಾವಾಸ್ವತ್ತಿನಲ್ಲಿ ಕೆಲವು ಭಾಗ ರಾಷ್ಟ್ರೀಯ ಹೆದ್ದಾರಿ 206 ಕ್ಕೆ ಭೂಸ್ವಾಧೀನವಾಗಿರುತ್ತದೆ ಎಂದರೆ ಸರಿ. ಸದರಿ ಭೂಸ್ವಾಧೀನಕ್ಕೆ ಸಂಬಂಧಿದಂತೆ ಸಂಬಂದ ಪಟ್ಟ ಇಲಾಖೆಯವರು ಅವಾರ್ಡ್ ನೋಟೀಸ್ ಅನ್ನು ನಮಗೆ ನೀಡಿರುತ್ತಾರೆ. ಸದರಿ ನೋಟೀಸ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

7. ಸದರಿ ಅವಾರ್ಡ್ ನ ವಿರುದ್ದ ಸಂಬಂದಪಟ್ಟ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಸದರಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಅವಾರ್ಡ್ ನೋಟೀಸ್ ಅನ್ನುಪ್ರತಿವಾದಿಗೆ ನೀಡಿದ್ದು ಅವರು ಪರಿಹಾರವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಅ ವರು ಮೋಸದಿಂದ ಪಡೆದುಕೊಂಡಿರಬಹುದು ಎನ್ನುತ್ತಾರೆ. 1 ನೇ ಪ್ರತಿವಾದಿ ಮೋಸದಿಂದ ಸದರಿ ಪರಿಹಾರ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ನಾನು ಯಾವುದೇ ದೂರು ನೀಡಿರುವುದಿಲ್ಲ.

8. ನನ್ನ ತಂದೆಯ ವಿವಾಹ ಯಾವ ಇಸವಿಯಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕಿಬ್ಬನಹಳ್ಳಿ ಪಾಳ್ಯದಿಂದ ತ್ಯಾಗಟೂರಿಗೆ ಯಾವ ಇಸವಿಯಲ್ಲಿ ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ತ್ಯಾಗಟೂರಿನಲ್ಲಿ ವಾಸವಿದ್ದರು ಎಂದು ತೋರಿಸಲು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ನಿ.ಪಿ.2 ಮತ್ತು 3 1 ನೇ ಪ್ರತಿವಾದಿಯ ಗಂಡ ರಾಮಯ್ಯರವರಿಗೆ ಸೇರಿದ್ದು ಎಂದರೆ ಸರಿಯಲ್ಲ. ನಿ.ಪಿ.8 1 ನೇ ಪ್ರತಿವಾದಿಯ ಕುಟುಂಬದ ವಂಶವೃಕ್ಷ ಎಂದರೆ ಸರಿ. ನನ್ನ ತಾಯಿಯ ಮತ್ತು ತಂದೆಯ ಕುಟುಂಬಗಳ ವಂಶವೃಕ್ಷಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಅವಿದ್ಯಾವಂತ. ನಿ.ಪಿ.10,11,12,13 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ದಾವಾಸ್ವತ್ತು 1 ನೇ ಪ್ರತಿವಾದಿಯ ಗಂಡನಿಗೆ ಮಂಜೂರಾಗಿದ್ದು ಎಂದರೆ ಸರಿಯಲ್ಲ. ನನ್ನ ತಂದೆ ವಾದಿಯ ತಂದೆ ಹನುಮಂತಯ್ಯರವರ ಅಳಿಯ ಎಂದರೆ ಸರಿ. ಹನುಮಂತಯ್ಯ ನನ್ನ ತಂದೆಯ ತಂದೆ ಎಂದು ಸುಳ್ಳು ವಂಶವೃಕ್ಷವನ್ನು ಸೃಷ್ಟಿಸಿ ದಾವಾಸ್ವತ್ತನ್ನು ಕಬಳಿಸಲು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ,ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

9. ನಮ್ಮ ತಂದೆ ತಾಯಿಗೆ 5 ಜನ ಹೆಣ್ಣುಮಕ್ಕಳು ಅವರೆಂದರೆ ಲಕ್ಷ್ಮೀದೇವಮ್ಮ , ಶಿವಮ್ಮ, ಹನುಮಂತರಾಯಪ್ಪ , ರತ್ನಮ್ಮ , ನಾನು , ಚಂದ್ರಮ್ಮ, ತಿಮ್ಮಮ್ಮ. ನನ್ನ ತಂದೆಯ ತಾತನ ಹೆಸರು ಹನುಮಂತಯ್ಯ. ಅವರ ಹೆಂಡತಿ ಕೆಂಪಮ್ಮ. ಅವರ ಮಕ್ಕಳು ರಾಮಯ್ಯ, ಲೆಂಕಪ್ಪ ,ಲಕ್ಷ್ಮಮ್ಮ , ಹನುಮಂತಯ್ಯ, ಗಂಗಮ್ಮ. ನನ್ನ ತಂದೆಯ ತಂದೆ ಮತ್ತು ತಾಯಿಯ ತಂದೆ ಇಬ್ಬರ ಹೆಸರು ಹನುಮಂತಯ್ಯ ಎನ್ನುವುದನ್ನು ದುರುಪಯೋಗಪಡಿಸಿಕೊಂಡು ದಾವಾಸ್ವತ್ತನ್ನು ಕಬಳಿಸಲು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

10. ದಾವಾಸ್ವತ್ತನ್ನು ಮಂಜೂರು ಮಾಡಿಸಿಕೊಳ್ಳಲು ನನ್ನ ತಂದೆಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ ಮತ್ತು ಕಿಮ್ಮತ್ತು ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಿದಂತೆ ಯಾವುದೇ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ರಾಮಯ್ಯ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**